(57) - 157 ನೇ ಶ.ಪ

**<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ, ಡಿ.ಟಿ.ಶ್ರೀನಿವಾಸ್ ಇವರ ನಿಯಮ</u>**

**<u>330 ರಡಿ ಪ್ರಸ್ತಾಪಿಸಿರುವ ವಿಷಯದ ಕುರಿತು</u>**

**<u>ವಿಷಯ</u>**

ಸರ್ಕಾರಿ ಪ್ರೌಢಶಾಲೆಗಳಲ್ಲಿ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿಕ್ಷಕರನ್ನು ನೇಮಕಾತಿ ಸಂದರ್ಭದಲ್ಲಿ ನೀಡಿದ್ದ ಮೂಲ ದಾಖಲೆಗಳು ನಕಲಿಯಾಗಿವೆ ಎಂದು 2022-23 ಸಾಲಿನಲ್ಲಿ ಸುಮಾರು 81 ಜನ ಸಹ ಶಿಕ್ಷಕರನ್ನು ಸೇವೆಯಿಂದ ಅಮಾನತ್ತುಗೊಳಿಸಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ನೇಮಕ ಮಾಡಲಾಗಿರುತ್ತದೆ. ಅಮಾನತ್ತುಗೊಂಡಿರುವ ಶಿಕ್ಷಕರಲ್ಲಿ ಹೆಚ್ಚಿನವರು ವಿಜ್ಞಾನ ಮತ್ತು ಗಣಿತ ಶಿಕ್ಷಕರುಗಳೇ ಆಗಿದ್ದಾರೆ. ಇವರನ್ನು ಅಮಾನತ್ತು ಮಾಡಿದ 6 ತಿಂಗಳ ನಂತರ ಶೇಕಡ 75ರಷ್ಟು ವೇತನವನ್ನು ಕಳೆದ 3 ವರ್ಷಗಳಿಂದ ವೇತನ ನೀಡಲಾಗುತ್ತಿದ್ದು ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತಿದೆ. ಮೂರುವರೆ ವರ್ಷ ಆದರೂ ಇವರ ತನಿಖೆಯನ್ನು ಪೂರ್ಣಗೊಳಿಸದೆ ಯಾವುದೇ ತೀರ್ಮಾನವನ್ನು ಕೈಗೊಳ್ಳದೆ ಶಿಕ್ಷಣ ಇಲಾಖಾ ಅಧಿಕಾರಿಗಳು ವಿನಾ ಕಾರಣ ವಿಳಂಬ ಮಾಡಲಾಗುತ್ತಿದೆ. ಈ ಶಿಕ್ಷಕರುಗಳಿಗೆ ಪ್ರತಿ ತಿಂಗಳು ಮನೆಯಲ್ಲಿ ಕೂರಿಸಿ ಲಕ್ಷಾಂತರ ರೂಪಾಯಿ ಸಂಬಳವನ್ನು ನೀಡುತ್ತಿದ್ದಾರೆ. ಸದರಿ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಶಾಲೆಗಳಲ್ಲಿ ಇವರ ಸ್ಥಳದಲ್ಲಿ ಬೇರೆ ಶಿಕ್ಷಕರನ್ನು ನೇಮಕ ಮಾಡದೆ ವರ್ಗಾವಣೆಯಲ್ಲಿಯು ಹುದ್ದೆ ತುಂಬದೆ ಇರುವುದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತುಂಬಾ ತೊಂದರೆಯಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗು ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸುವ ಕಾರಣದಿಂದಾಗಿ ಕೂಡಲೇ ಸದರಿ ಶಿಕ್ಷಕರುಗಳ ಮೇಲೆ ಇರುವ ತನಿಖೆಯನ್ನು ಪೂರ್ಣಗೊಳಿಸಬೇಕೆಂಬ ವಿಷಯವನ್ನು ಪ್ರಸ್ತಾಪಿಸಿರುವ ಕುರಿತು

**<u>ಉತ್ತರ:</u>**

2012-13 ಮತ್ತು 2014-15 ನೇ ಸಾಲಿನ ಪ್ರೌಢಶಾಲಾ ಸಹಶಿಕ್ಷಕರು ಗ್ರೇಡ್-2 ಮತ್ತು ದೈಹಿಕ ಶಿಕ್ಷಕರು ಗ್ರೇಡ್-1 ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಅಕ್ರಮ ನೇಮಕಾತಿಯಲ್ಲಿನ ಆರೋಪಿತ ಶಿಕ್ಷಕರಿಗೆ ಶಿಸ್ತು ಪ್ರಾಧಿಕಾರಿಗಳಾದ ಶಾಲಾ ಶಿಕ್ಷಣ ಇಲಾಖೆಯ ಆಯಾ ಜಿಲ್ಲಾ ಉಪನಿರ್ದೇಶಕರುಗಳು ಸದರಿ ಶಿಕ್ಷಕರನ್ನು ಅಮಾನತ್ತುಗೊಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ.

ಒಟ್ಟು **79** ಪ್ರಕರಣಗಳಿದ್ದು, ಜಿಲ್ಲಾವಾರು ಅಂಕಿ-ಅಂಶದ ಮಾಹಿತಿ ಕೆಳಗಿನಂತಿದೆ

| ಕ್ರ ಸ | ಜಿಲ್ಲೆಯ ಹೆಸರು | ಅಮಾನತ್ತುಗೊಂಡ ಶಿಕ್ಷಕರ ಸಂಖ್ಯೆ |
|---|---|---|
| 1 | ಕೋಲಾರ | 29 |
| 2 | ತುಮಕೂರು | 12 |
| 3 | ಬೆಂಗಳೂರು ದಕ್ಷಿಣ | 7 |
| 4 | ಬೆಂಗಳೂರು ಉತ್ತರ | 1 |
| 5 | ಬೆಂಗಳೂರು ಗ್ರಾಮಾಂತರ | 2 |
| 6 | ಚಿಕ್ಕಬಳ್ಳಾಪುರ | 9 |
| 7 | ಚಿತ್ರದುರ್ಗ | 7 |

| | | |
|---|---|---|
| 8 | ದಾವಣಗೆರೆ | 3 |
| 9 | ಮಧುಗಿರಿ | 6 |
| 10 | ಶಿವಮೊಗ್ಗ | 2 |
| 11 | ರಾಮನಗರ | 1 |
| | **ಒಟ್ಟು** | **79** |

ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ವೃಂದಕ್ಕೆ ಸಂಬಂಧ ಪಟ್ಟಂತೆ ಶಿಸ್ತುಪ್ರಾಧಿಕಾರಿಯವರು ಆಯಾ ಜಿಲ್ಲೆಯ ಉಪನಿರ್ದೇಶಕರುಗಳು ಆಗಿರುತ್ತಾರೆ. ಆದರೆ, ಸದರಿ ಪ್ರಕರಣವು ಸಂಕೀರ್ಣ ಮತ್ತು ಅತ್ಯಂತ ಗಂಭೀರ ಸ್ವರೂಪದ್ದಾಗಿರುವುದರಿಂದ ಈ ಕುರಿತು ನಿವೃತ್ತ ನ್ಯಾಯಾಧೀಶರಿಂದ ತನಿಖೆಗೆ ತೀರ್ಮಾನಿಸಿ, ಎಲ್ಲ ಪ್ರಕರಣಗಳು ಒಂದೇ ಸ್ವರೂಪದ್ದಾಗಿರುವದರಿಂದ ಸದರಿ ಪ್ರಕರಣಗಳ ತನಿಖೆಗೆ ಆಯಾ ಜಿಲ್ಲಾ ಉಪನಿರ್ದೇಶಕರುಗಳು ನಿವೃತ್ತ 'ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು' ವಿಚಾರಣಾಧಿಕಾರಿಯಾಗಿ ನೇಮಿಸಲಾಗಿರುತ್ತದೆ. ಹಾಗೂ ಪ್ರಕರಣಕ್ಕೆ ಒಟ್ಟಾರೆಯಾಗಿ ಒಬ್ಬರೇ ಮಂಡನಾಧಿಕಾರಿಯನ್ನು ನೇಮಿಸಲಾಗಿರುತ್ತದೆ. ವಿಚಾರಣೆಗಳು ಜಿಲ್ಲಾವಾರು ಪ್ರತ್ಯೇಕ ವಿಚಾರಣೆಗಳಾಗಿರುತ್ತವೆ.

ಪ್ರಕರಣದ ವಿಚಾರಣೆ ಪ್ರಾರಂಭವಾಗಿ ಪ್ರಗತಿ ಹಂತದಲ್ಲಿದೆ. ವಿಚಾರಣೆಯನ್ನು ಒಟ್ಟಾರೆಯಾಗಿ ನಿರ್ವಹಿಸಿ ವರದಿಯನ್ನು ಕನಿಷ್ಠ ಅವಧಿಯೊಳಗೆ ಸಲ್ಲಿಸಲು ತಿಳಿಸಲಾಗಿರುತ್ತದೆ. ಸದರಿ ವಿಚಾರಣಾಧಿಕಾರಿಗಳಿಗೆ 79 ಶಿಕ್ಷಕರ ವಿಚಾರಣೆಯನ್ನು ವಹಿಸಿರುವುದರಿಂದ ಈ ಎಲ್ಲಾ 79 ಶಿಕ್ಷಕರ ವಿಚಾರಣೆಯನ್ನು ಪ್ರತ್ಯೇಕವಾಗಿ ನಡೆಸಬೇಕಿರುವುದರಿಂದ ವಿಚಾರಣೆ ನಡೆಸಲು ಇನ್ನೂ ಹೆಚ್ಚಿನ ಕಾಲಾವಕಾಶ ಕೋರಿರುತ್ತಾರೆ.

ಸದರಿ ಶಿಕ್ಷಕರ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿರುವುದರಿಂದ ಮುಂದಿನ ಆದೇಶದವರೆಗೆ ಅಮಾನತ್ತನ್ನು ಮುಂದುವರೆಸಲು ಹಾಗೂ ಸದರಿ ಶಿಕ್ಷಕರಿಗೆ ಕೆ.ಸಿ.ಎಸ್.ಆರ್. ನಿಯಮ 98(ಬಿ)(i)(ii) ಮತ್ತು(iii) ರಂತೆ ಶೇಕಡಾ 50 ರಷ್ಟು ಜೀವನಾಧಾರ ಭತ್ಯೆಯನ್ನು ನೀಡಲು ಸೂಚಿಸಲಾಗಿದೆ.

ಸದರಿ ಶಿಕ್ಷಕರುಗಳ ಅಮಾನತ್ತಿನಿಂದ ತೆರವಾಗಿರುವ ಹುದ್ದೆಗಳಿಗೆ ಮಕ್ಕಳಿಗೆ ಶೈಕ್ಷಣಿಕವಾಗಿ ಯಾವುದೇ ತೊಂದರೆಯಾಗದಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ತಾತ್ಕಾಲಿಕ ಪರ್ಯಾಯ ವ್ಯವಸ್ಥೆ ಮಾಡಿರುತ್ತಾರೆ.

**ಕಡತ ಸಂಖ್ಯೆ: ಇಪಿ 393 ಎಸ್‌ಇಎಸ್ 2025**

(ಎಸ್ ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು